# ಟೊಮ್ಯಾಟೊ ಲೀಲೆಗಳು

**‘ಅತ್ತೆಗೊಂದು ಕಾಲ, ಸೊಸೆಗೊಂದು ಕಾಲ’ ಗಾದೆಯನ್ನು ‘ಈರುಳ್ಳಿಗೊಂದು ಕಾಲ, ಟೊಮ್ಯಾಟೊಗೊಂದು ಕಾಲ’ ಎಂದು ಬದಲಿಸಬೇಕು. ಈಗ ನಡೆಯುತ್ತಿರುವುದು ಟೊಮ್ಯಾಟೊ ಕಾಲ. ಈ ಟೊಮ್ಯಾಟೊ ಲೀಲೆ ಒಂದೇ ಎರಡೇ... ಉಳ್ಳವರ ಕೈಗೂ ಅದು ಎಟುಕದಷ್ಟು ಎತ್ತರ ಮುಟ್ಟಿದೆ.**

**■ ಸವಿತಾ ಮಾಧವ ಶಾಸ್ತ್ರಿ ಗುಂಡ್ಮಿ**



ನಾವು ಹೆಂಗಸರು ಬಹಳ ಬುದ್ಧಿವಂತರು. ತಿಂಗಳ ಖರ್ಚಿಗೆಂದು ಗಂಡ ಕೊಡುವ ಹಣದಲ್ಲೇ ಮನೆ ಖರ್ಚು ಹೇಗೆ ನಿಭಾಯಿಸಬೇಕು ಎಂದು ತಾಯಿಯ ಹೊಟ್ಟೆಯಲ್ಲಿದ್ದಾಗಲೆ ಕಲಿತು ಬಂದಿರುತ್ತೇವೆ. ಹೀಗಾಗಿ ಈಗ ನಮ್ಮ ಸದ್ಯದ ಪ್ರಾಬ್ಲಂ ಅನ್ನು ಸಮರ್ಥವಾಗಿ ನಿಭಾಯಿಸಿಕೊಂಡು ಹೋಗ್ತಾ ಇದೀವಿ. ಏನಪ್ಪಾ ಆ ಪ್ರಾಬ್ಲೆಮ್ ಅಂದಿರಾ? ಅದೇರಿ, ಟೊಮ್ಯಾಟೊ ರೇಟು ಗಾಳಿ ತುಂಬಿದ ಪ್ಯಾರಾಚೂಟ್‌ನಂತೆ ಆಕಾಶಕ್ಕೆ ಏರಿರೋದು. ಅದು ತನ್ನ ಸೊಕ್ಕೆಲ್ಲ ಉಡುಗಿಸಿಕೊಂಡು ಗಾಳಿ ಠುಸ್ಸೆಂದು ಖಾಲಿಯಾಗಿ ಮತ್ತೆ ಹಳೇ ರೇಟಿಗೆ ಬರೋವರೆಗೂ ನನ್ನಂತೆ ಹೆಚ್ಚಿನ ಹೆಂಗಸರು ಟೊಮ್ಯಾಟೊ ಮುಟ್ಟೋಕೆ ಹೋಗೋದಿಲ್ಲ. ಸುಮ್ಮನೆ ಯಾಕೆ ಅದನ್ನು ಮುಟ್ಟಿ ಶಾಕ್ ಹೊಡೆಸಿಕೊಳ್ಳೋದು!

ನಾನಂತೂ ಈಗ ಟೊಮ್ಯಾಟೊ ಬಳಸದೆ ಮಾಡುವ ಅಜ್ಜಿ ಕಾಲದ ವೆರೈಟಿ ವೆರೈಟಿ ಸಾರುಗಳನ್ನು ಮಾಡಿ ಉಣಬಡಿಸ್ತಾ ಇದೀನಿ. ಹಿಂದಿನ ಕಾಲದಲ್ಲಿ ಮಾಡುತ್ತಿದ್ದ ಹುರುಳಿ ಸಾರು, ಹೆಸರುಕಾಳಿನ ಸಾರು, ಮಜ್ಜಿಗೆ ಸಾರು, ನಿಂಬೆಹಣ್ಣಿನ ಸಾರು, ಕಾಳುಮೆಣಸಿನ ಸಾರು, ಹೀಗೆ ವಾರಪೂರ್ತಿ ಸಾರು ಮಾಡಿದರೂ ಎಲ್ಲೂ ಟೊಮ್ಯಾಟೊ ಬಳಕೆಯಿಲ್ಲ. ಮತ್ತೆ ಕೆಲವು ತಿಂಡಿಗಳಿಗೂ ಟೊಮ್ಯಾಟೊ ಬದಲಿಗೆ ಹುಣಿಸೆ, ನಿಂಬೆರಸ, ಮೊಸರು, ಬಿಂಬುಳಿ – ಹೀಗೆ ಹುಳಿ ಇರುವ ಯಾವುದಾದರೂ ಬೇರೆ ಪದಾರ್ಥಗಳನ್ನು ಹಾಕಿ ಟೊಮ್ಯಾಟೊಗೆ ಸದ್ಯಕ್ಕೆ ಖೊಕ್ ಕೊಟ್ಟಿರುವೆ.

ಈಗ ಯಾವ ವಾಟ್ಸಪ್ ಗ್ರೂಪ್‌ನಲ್ಲಿ